ಎಂ ಸಿ ನಂ.8/2025

ಪಿ.ಡಬ್ಲ್ಯೂ-1 ಶಿವಶರಣ ತಂದೆ ಬಾಬುರಾಯ ಖೇಡಗಿ

**(ಇಂದು ದಿನಾಂಕಃ 24-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಖ್ಯ ವಿಚಾರಣೆಃ ಶ್ರೀ ಎಂ ಆರ್ ಕೆ ವಕೀಲರಿಂದ.

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ನನ್ನ ಹೇಳಿಕೆಯ ಮೇರೆಗೆ ಅದನ್ನು ದಾಖಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತವೆ ಎಂದು ಪ್ರಮಾಣಿಕರಿಸಿರುತ್ತೇನೆ.

ನಾನು ಮದುವೆ ಆಮಂತ್ರಣ ಪತ್ರಿಕೆ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೧ ಎಂದು, ಪೋಟೋ ಹಾಜರುಪಡಿಸಿದ್ದು ಅದನ್ನು ನಿಪಿ-೨ ಎಂದು ಗುರುತಿಸಲಾಯಿತು.

ಕ್ರಿಮಿನಲ್ ಮಿಸಲೇನಿಯಸ್ ನಂಬರ ೩/೨೦೨೩ ರಲ್ಲಿನ ಆದೇಶ ಪುಟದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೩ ಎಂದು ಗುರುತಿಸಲಾಯಿತು. ಸದರಿ ಕೇಸಿನಲ್ಲಿ ಹಾಕಿದ ಅರ್ಜಿಯ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೪ ಎಂದು ಗುರುತಿಸಲಾಯಿತು.

ಸದರಿ ಕೇಸಿನಲ್ಲಿ ಹಾಕಿದ ತಕರಾರಿನ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೫ ಎಂದು ಗುರುತಿಸಲಾಯಿತು.

ಸದರಿ ಕೇಸಿನಲ್ಲಿ ಹಾಕಿದ ಮೆಮೋ, ಅರ್ಜಿ ಮತ್ತು ಅಸೆಟ್ಸ್ ಅಂಡ್ ಲಯಬ್ಲಿಟಿಸ್ ಮತ್ತು ಅರ್ಜಿ ಹಾಗೂ ತಕರಾರುಗಳ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-೬ ರಿಂದ ನಿಪಿ-೧೦ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ಸಮಯ ಕೋರಿದ್ದರಿಂದ ಸಮಯಾವಾಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.